ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 419
2. ಸದಸ್ಯರ ಹೆಸರು : ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸುವ ದಿನಾಂಕ : 10-12-2020
4. ಉತ್ತರಿಸುವವರು : ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಶಿವಾನಂದ ವೃತ್ತದ ಬಳಿ ಉಕ್ಕಿನ ಸೇತುವೆ ಕಾರ್ಯವು ಅಪೂರ್ಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು. ಬಂದಿರುತ್ತದೆ.
ಆ	ಈ ಸೇತುವೆಯನ್ನು ತುರ್ತಾಗಿ ಪೂರ್ಣಗೊಳಿಸಲು ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು;	• ಶಿವಾನಂದ ವೃತ್ತದ ಬಳಿ ಉಕ್ಕಿನ ಸೇತುವೆ ನಿರ್ಮಾಣ ಕಾಮಗಾರಿಗೆ ಸರ್ಕಾರವು ದಿನಾಂಕ: 24-06-2017 ರಂದು ಅನುಮೋದನೆಯನ್ನು ನೀಡಿದ್ದು, ಅದರಂತೆ ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸಿದ್ದು, ಸ್ಥಳೀಯ ನಿವಾಸಿಗಳು ಯೋಜನೆಯ ವಿರುದ್ಧ ಆಕ್ಷೇಪಣೆ ವ್ಯಕ್ತಪಡಿಸಿ, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಿನಾಂಕ: 19-08-2017 ರಂದು ರಿಟ್ ಅರ್ಜಿ ಸಲ್ಲಿಸಿದ್ದು, ಈ ಅರ್ಜಿಗೆ ಸಂಬಂಧಪಟ್ಟಂತೆ ಹಲವಾರು ಬಾರಿ ವಿಚಾರಣೆಗಳು ನಡೆದಿದ್ದು, ದಿನಾಂಕ: 08-01-2018 ರಂದು ಮಾನ್ಯ ಉಚ್ಚ ನ್ಯಾಯಾಲಯವು ಯೋಜನೆಯ ವಿನ್ಯಾಸವನ್ನು ಪರಿಷ್ಕರಿಸಿ ಕಾಮಗಾರಿಯನ್ನು ಪುನಃ ಪ್ರಾರಂಭ ಮಾಡಲು ಮಧ್ಯಂತರ ಆದೇಶ ನೀಡಿರುತ್ತದೆ. • ಸರ್ಕಾರವು ಅನುಮೋದನೆ ನೀಡಿರುವ ಯೋಜನೆ ಅಡಿಯಲ್ಲಿ ಫ್ಲೈಓವರ್ ಉದ್ದ 110.00ಮೀ ಹಾಗೂ ವಿಸ್ತೀರ್ಣವು 1760 ಚ.ಮೀ. ಇದ್ದು, ಹಾಲಿ ಯೋಜನೆಯಲ್ಲಿ ಶೇ.95 ರಷ್ಟು ಕಾಮಗಾರಿಯನ್ನು ಪೂರ್ಣಗೊಳಿಸಲಾಗಿರುತ್ತದೆ. • ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ಆದೇಶದಂತೆ ಯೋಜನೆಯನ್ನು ಪರಿಷ್ಕರಿಸಿದಾಗ ತಾಂತ್ರಿಕ ವಿಚಾರಗಳಾದ ಫ್ಲೈಓವರ್ ಉದ್ದ 301.36ಮೀ. ಹಾಗೂ ವಿಸ್ತೀರ್ಣವು 4960 ಚ.ಮೀ. ಗೆ ಹೊಸದಾಗಿ ಎರಡು ಕಡೆ ರ್‍ಯಾಂಪ್‌ಗಳ ಉದ್ದ 181.69 ಮೀಟರ್‌ಗಳು ಹಾಗೂ ವಿಸ್ತೀರ್ಣ 2937.04 ಚ.ಮೀ. ಗಳಿಗೆ ಪುನಃ ಅಂದಾಜು ಪಟ್ಟಿಯನ್ನು ಪರಿಷ್ಕರಿಸಿದ್ದು, ರೂ.43,68,99,097-69 ಮೊತ್ತದ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಿ, ಸದರಿ ಹೆಚ್ಚುವರಿ ಕಾಮಗಾರಿಗಳನ್ನು ಮೂಲ ಗುತ್ತಿಗೆದಾರರಾದ

. . .2/-

		ಮೆ॥ ಎಂ. ವೆಂಕಟರಾವ್ ಇನ್ಫ್ರಾ ಪ್ರೊಜೆಕ್ಟ್ಸ್ ಪ್ರೈ.ಲಿ., ರವರಿಗೆ ರೂ.39,54,20,012-00 ರ ಪರಿಷ್ಕೃತ ಗುತ್ತಿಗೆ ಮೊತ್ತಕ್ಕೆ ವಹಿಸಲು ಸರ್ಕಾರದ ಆದೇಶ ಸಂಖ್ಯೆ: ನಅಇ 22 ಎಂಎನ್‌ವೈ 2019, ದಿನಾಂಕ: 17-04-2020 ರನ್ವಯ ಸರ್ಕಾರದ ಅನುಮೋದನೆ ನೀಡಲಾಗಿರುತ್ತದೆ. • ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿದ್ದು, ಹಾಲಿ ವ್ಯವಸ್ಥೆಯಲ್ಲಿ ಒಟ್ಟಾರೆ ಶೇ.50 ರಷ್ಟು ಪ್ರಗತಿಯನ್ನು ಸಾಧಿಸಲಾಗಿದ್ದು, ಏಪ್ರಿಲ್ ಅಂತ್ಯದೊಳಗಾಗಿ ಯೋಜನೆಯನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.
ಇ	ಸದರಿ ಕಾಮಗಾರಿಯ ಅಂದಾಜು ವೆಚ್ಚ ಎಷ್ಟು; ಇಲ್ಲಿಯವರೆವಿಗೂ ಈ ಸೇತುವೆಗೆ ಎಷ್ಟು ಅನುದಾನ ಒದಗಿಸಲಾಗಿದೆ; ಈ ರೀತಿ ನಿಧಾನಗತಿಯ ಕಾಮಗಾರಿಗಳಿಂದ ಸರ್ಕಾರಕ್ಕೆ ಎಷ್ಟು ಆರ್ಥಿಕ ನಷ್ಟ ಉಂಟಾಗಿದೆ; (ವಿವರ ನೀಡುವುದು)	• ಈ ಯೋಜನೆಯ ಅಂದಾಜು ವೆಚ್ಚ ರೂ.60.00 ಕೋಟಿಗಳಾಗಿದ್ದು, ಇಲ್ಲಿಯವರೆಗೆ ಸರ್ಕಾರವು ರೂ.50.00 ಕೋಟಿಗಳ ಅನುದಾನವನ್ನು ಪಾಲಿಕೆಗೆ ಬಿಡುಗಡೆ ಮಾಡಿರುತ್ತದೆ. • ಮಾನ್ಯ ನ್ಯಾಯಾಲಯದ ಮಧ್ಯಂತರ ಆದೇಶದ ಮೇರೆಗೆ ಮೂಲ ಅಂದಾಜು ಪಟ್ಟಿಯನ್ನು ಪರಿಷ್ಕರಿಸಿದ್ದು, ಸ್ಥಳಕ್ಕೆ ಅನುಗುಣವಾಗಿ ಹೆಚ್ಚುವರಿ ಪ್ರಮಾಣಗಳಾಗಿದ್ದು, ಸರ್ಕಾರವು ಪರಿಷ್ಕೃತ ಯೋಜನೆ ಮೊತ್ತ ರೂ.39.54 ಕೋಟಿಗಳಿಗೆ ಅನುಮೋದನೆ ನೀಡಿದ್ದು, ಯೋಜನೆಯಲ್ಲಿ ಅರಣ್ಯ ವಿಭಾಗದಿಂದ 32 ಮರಗಳನ್ನು ತೆರವು / ಸ್ಥಳಾಂತರಿಸಬೇಕಾಗಿದ್ದು, ಭೂಸ್ವಾಧೀನ ಕಾರ್ಯದಲ್ಲಿ 783.30 ಚ.ಮೀ. ಅಗತ್ಯವಿದ್ದು, ಈಗಾಗಲೇ 347.55 ಚ.ಮೀ. ಜಾಗವನ್ನು ಪಡೆಯಲಾಗಿದ್ದು, ಈಗ ಉಳಿದಿರುವ ಕೆಲಸಗಳನ್ನು ಶೀಘ್ರಗತಿಯಲ್ಲಿ ಪ್ರಾರಂಭಿಸಲಾಗಿರುತ್ತದೆ. • ಸದರಿ ಮೂಲ ಯೋಜನೆಯ ವಿನ್ಯಾಸದಲ್ಲಿ ಅನೇಕ ಬದಲಾವಣೆಗಳು ಆದ ಕಾರಣ ಸರ್ಕಾರವು ಪರಿಷ್ಕೃತ ಟೆಂಡರ್ ಮೊತ್ತ ರೂ.39.54 ಕೋಟಿಗಳಿಗೆ ಅನುಮೋದನೆ ನೀಡಿದ್ದು, ಈ ಯೋಜನೆಯಲ್ಲಿ ಯಾವುದೇ ಆರ್ಥಿಕ ನಷ್ಟ ಉಂಟಾಗಿರುವುದಿಲ್ಲ.
ಈ	ಈ ರೀತಿ ಬೆಂಗಳೂರಿನಲ್ಲಿ ಎಷ್ಟು ಸೇತುವೆ ಕಾಮಗಾರಿಗಳು ಅಪೂರ್ಣಗೊಂಡಿದೆ? (ವಿವರವಾದ ವರದಿ ನೀಡುವುದು)	ಅಂತಹ ಪ್ರಕರಣಗಳು ಯಾವುದೂ ಇರುವುದಿಲ್ಲ.

ಸಂಖ್ಯೆ: ನಅಇ 250 ಎಂಎನ್‌ವೈ 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ